**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 3653 /2023 ಸಿ.ಡಬ್ಲೂ.4 ಪಿ.ಡಬ್ಲೂ.2

| | |
|---|---|
| ಹೆಸರು | ಸಿದ್ದರಾಮಪ್ಪ |
| ತಂದೆ/ಗಂಡ | ದಾನಪ್ಪ |
| ವಯಸ್ಸು | 55 ವರ್ಷ |
| ಉದ್ಯೋಗ | ಶಾಖಾಧಿಕಾರಿಗಳು ಜೆಸ್ಕಂ |
| ವಾಸಸ್ಥಳ | ಚಿಣ್ಮಗೇರಿ |

ದಿನಾಂಕ 07-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ಆರೋಪಿಯ ಪರಿಚಯ ಇರುತ್ತದೆ. ಚಾಸ-1 ನಮ್ಮ ಸಿಬ್ಬಂದಿ, ಚಾಸ-5 ರಿಂದ 12 ನಮ್ಮ ಸಿಬ್ಬಂದಿ, ಚಾಸ-2,3 ನಮ್ಮ ಸಿಬ್ಬಂದಿ. ದಿಃ 31.05.2023 ಆಳಂದ ಪಟ್ಟಣದಲ್ಲಿರುವ ರಾಮ ಮಾರ್ಕೇಟ್, ಸೋನಾರ್ ಗಲ್ಲಿ ಅಲ್ಲಿ ಚಾಸ-1ರವರಿಗೆ ಕಂದಾಯ ವಸೂಲಾತಿ, ಗ್ರಾಹಕರ ಕುಂದು ಕೊರತೆಗಳನ್ನು ಆಲಿಸುವುದು, ಲೈನ್ ಪಾರ್ಟಗಳನ್ನು ಅಟೆಂಡ್ ಮಾಡಲು ಅವರನ್ನು ನಿಯೋಜಿಸಲಾಗಿತ್ತು. ನಂತರ ಅದೇ ದಿನ ಸಾಃ 04.30 ರಿಂದ 4.35 ಗಂಟೆಗೆ ನಾನು ಮಾತ್ತು ಚಾಸ-1ರವರು ಸೇರಿಕೊಂಡು ಆರೋಪಿ ತಂದೆಯ ಮನೆ ಮತ್ತು ಢಾಬಾದ ಬಿಲ್ ವಸೂಲಾತಿಗಾಗಿ ಹೋದಾಗ ಆರೋಪಿ ತಂದೆ ಮನೆಯಲ್ಲಿ ಇರಲಿಲ್ಲ ಆರೋಪಿ ಮನೆಯಲ್ಲೆ ಇದ್ದನು ಆಗ ಚಾಸ-1ರವರು ಮನೆ ಬಿಲ್ 3000 ಮೇಲ್ಪಟ್ಟು ಇದ್ದು ಮತ್ತು ಢಾಬಾದ ಬಿಲ್ 17018 ರೂಪಾಯಿ ಇತ್ತು ಅದನ್ನು ಪಾವತಿಸಲು ಹೇಳಿದಾಗ ಆರೋಪಿಯು ನನಗೆ ಕಟ್ಟಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ಆಗ ನಾನು ಮನೆಯ ಬಿಲ್ ನ್ನಾದರು ಪಾವತಿಸಬೇಕು ಎಂದು ಕೇಳಿದಾಗ ಅದನ್ನು ಸಹ ಪಾವತಿಸಲು ಆಗುವುದಿಲ್ಲ ಎಂದು ಹೇಳಿದಾಗ ನಾನು ಹಾಗದರೆ ನಿಮ್ಮ ವಿದ್ಯುತ್ ಕಡಿತಗೋಳಿಸುತ್ತೇವೆ ಎಂದು ಹೇಳಿರುತ್ತೇನೆ. ಆಗ ಆರೋಪಿಯು ನನಗೆ ರಾಂಡಕಿ ಬಚ್ಚೆ ಕೈಸಾ ಕಟ್ ಕರತೇ ಅಂತಾ ಬೈದು ಹೊಡೆಯಲು ಬಂದಾಗ ನಾನು ಚಾಸ-1ರವರಿಗೆ ಹೊಡೆಯುತ್ತಾರೆ ಎಂದು ಮುಂದೆ ಹೋದಾಗ ಆರೋಪಿಯು ನನಗೆ ಕೈಯಿಂದ ಎಡ ಕಪಾಳದ ಮೇಲೆ ಹೊಡೆದಿರುತ್ತಾನೆ. ಹಿಂದಕ್ಕೆ ಸರಿದರೂ ಸಹ ಮೈ ಮೇಲೆ ಬಂದು ಕೆಳಗೆ ಬೀಳಿಸಿರುತ್ತಾರೆ. ನಂತರ ಅಲ್ಲೆ ಇದ್ದ ಒಂದು ಇಟ್ಟಂಗಿಯನ್ನು ತೆಗೆದುಕೊಂಡು ಬೀಸಿ ವಗೆದಾಗ ನಾನು ಅದನ್ನು ತಪ್ಪಿ ಸಿಕೊಳ್ಳಲು ಹೋದಾಗ ನನಗೆ ಎಡಗೈ ಮುಂಗೈ ಮುಂದುಗಡೆಗೆ ಬಡಿದು ಗಾಯ ಆಗಿರುತ್ತದೆ. ನಂತರ ನಾನು ಕೆಳಗೆ ಬಿದ್ದಿರುತ್ತೇನೆ ಆಗ ನನಗೆ ಸರಿಯಾಗಿ ಪ್ರಜ್ಞೆ ಇರಲಿಲ್ಲ ಆರೋಪಿಯು ಅಲ್ಲೆ ಇದ್ದ ಒಂದು ಕಬ್ಬಿಣದ ರಾಡಿನಿಂದ ಎಡ ಕಾಲಿಗೆ ಹೊಡೆದಿರುತ್ತಾರೆ ನಂತರ ಚಾಸ-1ರವರು ಚಾಸ-

5ರವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದು ಅವರು ಮತ್ತು ನಮ್ಮ ಸಿಬ್ಬಂದಿಯಾದ ಚಾಸ-6,7 ಮತ್ತು 11ರವರು ಬಂದಿದ್ದರು. ನಂತರ ನನ್ನನ್ನು ನಮ್ಮ ಇಲಾಖಾ ವಾಹನದ ಮುಖಾಂತರ ಆಳಂದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ. ನಂತರ ವೈದ್ಯರು ಹೆಚ್ಚಿ ನ ಚಿಕಿತ್ಸೆಗೆಗಾಗಿ ಕಲಬುರಗಿ ಆಸ್ಪತ್ರೆಗೆ ಹೋಗಬೇಕು ಎಂದು ಹೇಳಿದ ಕಾರಣ ಯುನೆಟೈಡ ಆಸ್ಪತ್ರೆಗೆ ಹೋಗಿ 5-6 ದಿನಗಳ ಕಾಲ ಚಿಕಿತ್ಸೆ ಪಡೆದು ನನಗೆ ಹುಷಾರು ಆಗದ ಕಾರಣ ಸೋಲಾಪೂರದ ಜಮಾದರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ವೈದ್ಯರು ನನಗೆ ಕಿವಿಯ ನರಕ್ಕೆ ಪೆಟ್ಟಾದ ಕಾರಣ ಇನ್ನು ಮುಂದೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಜೀವನಪರಿಯಂತ ಹೀಗೆ ಇರುತ್ತದೆ ಎಂದು ತಿಳಿಸಿರುತ್ತಾರೆ. ವೈದ್ಯರ ಸಲಹೆ ಪ್ರಕಾರ ನನಗೆ ದೂರವಾಣಿ ಕರೆಗಳನ್ನು ಸ್ವಿಕಾರ ಮಾಡಲು ಆಗದ ಕಾರಣ ನಾನು ಬೇರೆ ಕಡೆಗೆ ವರ್ಗಾವಣೆಗೊಂಡು ಬೇರೆ ಕೆಲಸವನ್ನು ಮಾಡುತ್ತಿದ್ದೇನೆ. . ಸಾಕ್ಷಿಯು ಈಗಾ ಒಂದು ಇಟ್ಟಂಗಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು. ಮಾ-1 ಮತ್ತು 1 ಕಬ್ಬಿಣದ ರಾಡನ್ನು ಮು.ಮಾ-2 ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

<u>ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:</u>

ನಾನು ಕೆಳಗಡೆ ಬಿದ್ದಾಗ ಆರೋಪಿಯು ಹೊಟ್ಟೆ ಮೇಲೆ ಎಡಗಾಲಿನ ಮೇಲೆ ಒದ್ದು ಗುಪ್ತಗಾಯ ಮಾಡಿರುತ್ತಾನೆ ಎಂದರೆ ಸರಿ. ಆರೋಪಿಯು ಇನ್ನೊಮ್ಮೆ ನಮ್ಮ ಮನೆಗೆ ಬಿಲ್ ವಸೂಲಿಗಾಗಿ ಬಂದರೆ ನಿಮ್ಮನ್ನು ಜೀವ ಸಹಿತ ಬಿಡವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ರೀತಿ ದಿಃ 01.06.2023 ರಂದು ಯುನೆಟೈಡ್ ಆಸ್ಪತ್ರೆ ಕಲಬುರಗಿಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

<u>ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ